CW.21 PW.8

## ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.948/2016

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದೇಗೌಡ |
| ತಂದೆಯ ಹೆಸರು | ಚನ್ನೇಗೌಡ |
| ವಯಸ್ಸು | 49 ವರ್ಷ |
| ವೃತ್ತಿ | ಡಿವೈ ಎಸ್ ಪಿ , ಸಿ ಐ ಡಿ, ಬೆಂಗಳೂರು |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 09.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 27.09.2013 ರಿಂದ 28.07.2017 ರವರೆಗೂ ಸಿ ಪಿ ಐ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಅದರಂತೆ ಸಂಚಾರಿ ಪೋಲೀಸ್ ಠಾಣೆ ನನ್ನ ವ್ಯಾಪ್ತಿಗೆ ಬರುತ್ತಿತ್ತು.

ಆರೋಪಿಯನ್ನು ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ದಿಃ 26.05.2015 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ.

ಅದೇ ದಿನ ಸಾಕ್ಷಿದಾರರಾದ ಚಾಸಾ-2 ರಿಂದ 4 ಹಾಗೂ ಚಾಸಾ-15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ20.06.2015 ರಂದು ಪ್ರಕರಣದಲ್ಲಿ ಮೃತ ವ್ಯಕ್ತಿಯ ಪಿ ಎಂ ವರದಿಯನ್ನು ಚಾಸಾ-17 ರವರಿಂದ ಪಡೆದುಕೊಂಡಿರುತ್ತೇನೆ.

ದಿಃ10.08.2015 ರಂದು ಚಾಸಾ-16 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡು ಅಂತಿಮ ವರದಿಯನ್ನು ಆರೋಪಿ ವಿರುದ್ದ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಚಾಸಾ-2 ರವರ ಹೇಳಿಕೆಯ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪಿ ಎಂ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಐಎಂವಿ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಕಡತವನ್ನು ಚಾಸಾ-20 ರವರಿಂದ ಪಡೆದುಕೊಳ್ಳುವ ಪೂರ್ವದಲ್ಲಿ ನಾನು ಸ್ಥಳಕ್ಕೆ ಭೇಟಿ ಮಾಡಿರುವುದಿಲ್ಲ. ನಾನು ಕಚ್ಚಾ ನಕಾಶೆಯನ್ನು ತಯಾರು ಮಾಡಿರುವುದಿಲ್ಲ.ಚಾಸಾ-2 ರಿಂದ 4 ಹಾಗೂ 15 ರವರ ಹೇಳಿಕೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಹೇಳಿಕೆಗಳನ್ನು ದಿಃ26.05.2015 ರಲ್ಲಿ ಪಡೆದುಕೊಂಡಿದ್ದು ಅದನ್ನು ಗಣಕೀಕೃತವನ್ನು ನಮ್ಮ ಠಾಣಾ ಸಿಬ್ಬಂದಿಯಾದ ಮೋಹನ್ ರವರು ಮಾಡಿರುತ್ತಾರೆ. ಸದರಿಯವರನ್ನು ಸಾಕ್ಷಿಯಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಗಳನ್ನು ಕರೆ ಮಾಡಿ ಠಾಣೆಗೆ ಕರೆಯಿಸಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-2 ರಿಂದ 4 ರವರು ಕೊರಟಗೆರೆ ದೊಡ್ಡಿ ಗ್ರಾಮದವರು. ಚಾಸಾ-15 ರವರು ಅಕ್ಕೂರು ಹೊಸಹಳ್ಳಿ ಗ್ರಾಮದವರಾಗಿರುತ್ತಾರೆ.

ಸದರಿಯವರುಗಳು ಘಟನಾ ಸ್ಥಳದ ವಾಸಿಗಳು ಅಲ್ಲ ಎಂದರೆ ಸರಿಯಲ್ಲ. ಅವರು ಅದೇ ಸ್ಥಳದ ವಾಸಿಗಳಾಗಿರುತ್ತಾರೆಂದು ನುಡಿಯುತ್ತಾರೆ.

ಘಟನೆ ಆದ ಸಮಯದಲ್ಲಿ ಸದರಿ ಸಾಕ್ಷಿಗಳು ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಹಾಗೂ ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶವತನಿಖಾ ಸಮಯದಲ್ಲಿ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಐಎಂವಿ ವರದಿ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-2 ರಿಂದ 4 ಹಾಗೂ 15 ರವರು ಮೃತ ವ್ಯಕ್ತಿಯ ಸಂಬಂಧಿಕರು ಎಂದರೆ ಸರಿಯಲ್ಲ. ಕೇವಲ ಮೃತರ ಕುಟುಂಬಕ್ಕೆ ವಿಮೆ ಹಣ ಬರಲಿ ಎಂಬ ಕಾರಣಕ್ಕೆ ಒಂದು ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಘಟನೆ ಸಂಬಂಧ ಇದ್ದ ಆಜುಪಾಜುದಾರರನ್ನು ಸಾಕ್ಷಿಗಳನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರಿಂದ 4 ರವರು ಆಜುಪಾಜುದಾರರಾಗಿರುತ್ತಾರೆ.

ಆರೋಪಿಯ ತಪ್ಪಿ ನಿಂದ ಸದರಿ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ ವ್ಯಕ್ತಿಯು ರಸ್ತೆ ದಾಟುತ್ತಿದ್ದಾಗ ಹಸು ತಿವಿದು ಆಕೆ ಸಾವನ್ನಪ್ಪಿ ರುತ್ತಾರೆಂದರೆ ಸರಿಯಲ್ಲ. ಆಗ ಸಂಜೆ ಸುಮಾರು 6.30 ಗಂಟೆ ಸಮಯವಾದ್ದರಿಂದ ಅಲ್ಲಿ ಕತ್ತಲಾಗಿತ್ತು ಎಂದರೆ ಸರಿಯಲ್ಲ. ಸದರಿ ರಸ್ತೆಯು ಸಿಮೆಂಟ್ ರಸ್ತೆಯಾಗಿರುವ ಕಾರಣ ಆಕೆ ಬಿದ್ದಾಗ ತಲೆಗೆ ಪೆಟ್ಟಾಗಿ ಸಾವನ್ನಪ್ಪಿ ರುತ್ತಾರೆಂದರೆ ಸರಿಯಲ್ಲ. ಆರೋಪಿಯ ವಾಹನಕ್ಕೂ ಹಾಗೂ ಸದರಿ ಮೃತ ವ್ಯಕ್ತಿಗೂ ಯಾವುದೇ ಡಿಕ್ಕಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**